ಟೋನ್‌ಗಳ ಸಮ್ಮಿಲನ ಎದ್ದು ಕಾಣುತ್ತದೆ. ಪುರುಷರ ಒಡವೆಗಳಾದ ಬ್ರೇಸ್‌ಲೆಟ್, ಉಂಗುರ, ಪೆಂಡೆಂಟ್‌ಗಳು ಎಲ್ಲ ಪುರುಷರೂ ಆಯ್ಕೆ ಮಾಡುವಂತಿವೆ.

## ವೆರಿ ಸ್ಪೆಷಲ್!

'ಪ್ಲಾಟಿನಂ ಆಭರಣ ಮೇಲೆ ನನಗೆ ಮೊದಲಿನಿಂದಲೂ ವ್ಯಾಮೋಹ. ಇದರ ವಿನ್ಯಾಸದ ಸೊಬಗು, ಕುಸುರಿ ಕೆಲಸ ಹಾಗೂ ಸೂಕ್ಷ್ಮವಿನ್ಯಾಸದ ಅಂದಕ್ಕೆ ಮನಸೋತಿದ್ದೇನೆ. ಪ್ಲಾಟಿನಂ ಎವಾರ ಸಂಗ್ರಹದಲ್ಲಿ ಅತ್ಯಾಧುನಿಕ ವಿನ್ಯಾಸಗಳ ಒಡವೆ ಇದೆ. ಇದನ್ನು ಪತಿ ಜಹೀರ್ ಅವರ ತಾಯಿ ನನಗೆ ಮದುವೆ ಸಂದರ್ಭದಲ್ಲಿ ಉಡುಗೊರೆಯಾಗಿ ನೀಡಿದ್ದು 'ವೆರಿ ಸ್ಪೆಷಲ್' ಎನಿಸಿದೆ. ಹೀಗಾಗಿ ಈ ಆಭರಣದ ಮೇಲೆ ಯಾವಾಗಲೂ ನನ್ನ ಹೃದಯದಲ್ಲಿ ವಿಶೇಷ ಸ್ಥಾನ ಇದೆ' ಎನ್ನುತ್ತಾರೆ ಸಾಗರಿಕ ಘಾಟ್ಗೆ.

'ಪ್ಲಾಟಿನಂ ಎವಾರ ಒಡವೆಯಲ್ಲಿ ಬೇರೆ ಬೇರೆ ಸಂದರ್ಭ, ಸಮಯಗಳಲ್ಲಿ ಧರಿಸುವ ವೈವಿಧ್ಯತೆ ಇದೆ. ಈ ವಿನ್ಯಾಸಗಳು ಭಾರತೀಯ ಮತ್ತು ಪಾಶ್ಚಿಮಾತ್ಯ ಉಡುಪುಗಳೊಂದಿಗೆ ಹೊಂದಿಕೊಳ್ಳುತ್ತವೆ. ವಿರಳವಾದ ಮತ್ತು ಅಪೂರ್ವವಾದ ಪ್ಲಾಟಿನಂ ಒಡವೆ ತೊಟ್ಟುಕೊಳ್ಳಲು ಆರಾಮದಾಯಕ ಎನಿಸುತ್ತದೆ' ಎಂದು ತಮ್ಮ ಒಡವೆ ಮೋಹವನ್ನು ಅಭಿವ್ಯಕ್ತಿಸುತ್ತಾರೆ ಸಾಗರಿಕ.

'ಪ್ಲಾಟಿನಂ ಒಡವೆ ಅಪರೂಪದ್ದು ಹಾಗೂ ಬಹಳ ಬೇಗನೆ ಮನೆಮಾತಾಗಿರುವ ಒಡವೆಯಾಗಿದ್ದು, ಯುವ ಮನಸ್ಸನ್ನು ಶೀಘ್ರದಲ್ಲಿ ಗೆಲ್ಲುವಂತಿದೆ. ಲೋಹದ ಪರಿಶುದ್ಧತೆ ಹಾಗೂ ಅಂದ ಎಂಥವರನ್ನೂ ಮರುಳು ಮಾಡುವಂತಿದೆ. ಹೀಗಾಗಿ ಪ್ಲಾಟಿನಂ ಆಭರಣದತ್ತ ಈ ತಲೆಮಾರಿನ ಮಹಿಳೆಯರು ಹೆಚ್ಚು ಆಕರ್ಷಿತರಾಗಿದ್ದಾರೆ' ಎನ್ನುವುದು ಪ್ಲಾಟಿನಂ ಎವಾರ ಸಂಗ್ರಹದ ಪ್ರಚಾರ ರಾಯಭಾರಿಯೂ ಆಗಿರುವ ಸಾಗರಿಕ ಅಭಿಪ್ರಾಯ.

'ಪ್ಲಾಟಿನಂ ಆಭರಣವೇ ನನಗೆ ಮೊದಲ ಆದ್ಯತೆ' ಎನ್ನುತ್ತಲೇ ಒಡವೆ ಬಗ್ಗೆ ತಮ್ಮದೇ ವ್ಯಾಖ್ಯಾನ ನೀಡುತ್ತಾರೆ ಹೆಸರಾಂತ ಕ್ರಿಕೆಟಿಗ ಜಹೀರ್‌ಖಾನ್.

'ನನ್ನ ತಾಯಿ ಪ್ಲಾಟಿನಂ ಆಭರಣಗಳನ್ನು ಸಾಗರಿಕಾಗೆ ಆಶೀರ್ವಾದ ಮಾಡಲು ಆರಿಸಿಕೊಂಡಿದ್ದು ನನಗೆ ನಿಜಕ್ಕೂ ಹೃದಯಸ್ಪರ್ಶಿ ಕ್ಷಣವಾಗಿತ್ತು. ಇದರಲ್ಲಿ ಅನನ್ಯ ಮತ್ತು ಸಮಕಾಲೀನ ವಿನ್ಯಾಸಗಳಿದ್ದು ಪ್ಲಾಟಿನಂ ನೈಜ ರೀತಿಯಲ್ಲಿ ಹೊಂದಿಕೊಳ್ಳುವುದನ್ನು ನಾನು ಇಷ್ಟಪಡುತ್ತೇನೆ. ಈ ಆಭರಣ ಧರಿಸಿದ ಸಾಗರಿಕ ಕೂಡ ಆಕರ್ಷಕವಾಗಿ ಕಾಣುವುದು ಹಾಗೂ ಆಕೆ ಸಂತಸಪಡುವುದು ನನ್ನ ಜೀವನದ ಮಹತ್ವದ ಉದ್ದೇಶವೂ ಆಗಿದೆ' ಎಂದು ಪ್ಲಾಟಿನಂ ಆಭರಣವನ್ನು ತನ್ನ ಜೀವನ ಸಂಗಾತಿಯೊಂದಿಗೆ ಬೆಸೆಯುತ್ತಾರೆ ಈ ಕ್ರಿಕೆಟಿಗ.





ಜಹೀರ್‌ಖಾನ್–ಸಾಗರಿಕ ಘಾಟ್ಗೆ ದಂಪತಿ

## ಪ್ರೀತಿಯ ಸಂಕೇತ

'ಪ್ಲಾಟಿನಂ ಈಗ ಯುವಕ–ಯುವತಿಯ ನೆಚ್ಚಿನ ಆಯ್ಕೆಯ ಒಡವೆಯಾಗಿ ರೂಪುಗೊಂಡಿದೆ. ಇದರಲ್ಲಿನ ಅನನ್ಯ ಮತ್ತು ಸಮಕಾಲೀನ ವಿನ್ಯಾಸಗಳು ಪುರುಷರನ್ನೂ ಸೆಳೆಯುತ್ತವೆ; ಜೊತೆಗೆ ತಮ್ಮ ಬಾಳ ಸಂಗಾತಿಗಾಗಿ ಒಡವೆ ಆಯ್ಕೆ ಮಾಡುವಂತೆ ಪ್ರೇರೇಪಿಸುವಂತಿವೆ' ಎಂದು ಹೇಳುತ್ತಾರೆ ಆಭರಣ ಜ್ಯುವೆಲ್ಲರಿಯ ವ್ಯವಸ್ಥಾಪಕ ನಿರ್ದೇಶಕ ಪ್ರತಾಪ್ ಕಾಮತ್.

ಆಧುನಿಕ ಮನೋಭಾವದ ವಧೂವರರು ಭಾವನಾತ್ಮಕತೆಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಪ್ಲಾಟಿನಂ ಆಭರಣ 'ಪ್ರೀತಿಯ ಸಂಕೇತ' ಎಂಬ ಪರಿಕಲ್ಪನೆಯನ್ನೂ ಬಿಂಬಿಸುವ ಕಾರಣ ಹೆಚ್ಚಿನ ವಿವಾಹ ಆಕಾಂಕ್ಷಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ' ಎಂಬುದು ಪ್ರತಾಪ್ ಅಭಿಮತ.

'ಪ್ಲಾಟಿನಂ ಆಭರಣದಲ್ಲಿ ಹಲವಾರು ಆಯ್ಕೆಗಳಿವೆ. ಇದರಲ್ಲಿ ಪರಿಶುದ್ಧ ಗುಣ ಸ್ನೇಹ, ಪ್ರೀತಿ, ಬಾಂಧವ್ಯ ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಬ್ಬರು ವ್ಯಕ್ತಿ ಹಾಗೂ ಅವರ ಕುಟುಂಬಗಳ ನಡುವಿನ ಆಳವಾದ ಪ್ರೀತಿ, ವಿಶ್ವಾಸ, ಪರಸ್ಪರ ಸಂಬಂಧ ಎಲ್ಲವನ್ನೂ ಪ್ಲಾಟಿನಂ ಆಭರಣ ಬೆಸೆಯುವ ಕಾರಣ ಎವಾರ ಸಂಗ್ರಹ ಜನರಿಗೆ ಇಷ್ಟವಾಗಬಹುದು' ಎಂಬ ಆಶಾಭಾವನೆ ವ್ಯಕ್ತಪಡಿಸುತ್ತಾರೆ ಪ್ಲಾಟಿನಂ ಗಿಲ್ಡ್ ಇಂಟರ್‌ನ್ಯಾಷನಲ್ (ಪಿಐಜಿ)ನ ಮಾರುಕಟ್ಟೆ ನಿರ್ದೇಶಕಿ ಕಾಮ್ನಾ ಚೌಧರಿ.

ಎವಾರ ಶ್ರೇಣಿಯಲ್ಲಿರುವ ನೆಕ್ಲೇಸ್, ಕಿವಿಯೋಲೆ, ಬ್ರೇಸ್‌ಲೆಟ್, ಸರಗಳು ಮದುಮಕ್ಕಳಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಪ್ಲಾಟಿನಂ ಆಭರಣದ ಶುದ್ಧತೆಯ ಭರವಸೆಯನ್ನು ಗ್ರಾಹಕರಿಗೆ ನೀಡುವುದಕ್ಕಾಗಿ ಪ್ಲಾಟಿನಂ ಗಿಲ್ಡ್ ಇಂಡಿಯಾ ಪ್ರೈವೇಟ್ ಈಗ 'ಟ್ರಸ್ಟ್ ಎವರ್ ಅಶ್ಯೂರೆನ್ಸ್ ಸರ್ವೀಸ್' ಅನ್ನು ನೀಡುತ್ತಿದೆ. ಗುಣಮಟ್ಟ ಭರವಸೆಯ ಪರಿಶೋಧನೆ ಮತ್ತು ಪರೀಕ್ಷೆ ನಡೆಸಲೂ ಮುಂದಾಗಿದೆ. ಈ ಯೋಜನೆಯಡಿ ಭಾರತದಲ್ಲಿ ಎಲ್ಲ ಅಧಿಕೃತ ಪ್ಲಾಟಿನಂ ಆಭರಣ ಒಂದು ಗುಣಮಟ್ಟದ ಭರವಸೆಯ ಕಾರ್ಡ್‌ನೊಂದಿಗೆ ಬರುತ್ತದೆ. ಇವು ಶುದ್ಧತೆಯ ಗುರುತಾದ 'ಪಿಟಿ 950' ಎಂಬ ಹೆಸರನ್ನು ಆಭರಣದಲ್ಲಿ ಕೆತ್ತಲಾಗಿರುತ್ತದೆ. ವಾಪಸ್ ಖರೀದಿಯ 'ಬೈ ಬ್ಯಾಕ್' ಕೂಡ ಲಭ್ಯ ಇರುವುದರಿಂದ ಹಾಲ್‌ಮಾರ್ಕ್ ಇರುವ ಪ್ಲಾಟಿನಂ ಒಡವೆಯನ್ನೇ ಖರೀದಿಸಬೇಕು' ಎಂದು ಸಲಹೆ ನೀಡುತ್ತಾರೆ ಕಾಮ್ನಾ ಚೌಧರಿ. ■